669 (812) ಶ್ರೀ ಅಂಗಾರ ಎಸ್. (ಸೂಳ್ಯ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೇ?

ಅ) ಸೂಳ್ಯದ ಉಪ್ಪಿನಂಗಡಿ – ಕಡಬ ರಸ್ತೆಯು ತುಂಬಾ ಕೆಟ್ಟಿದ್ದು ವಾಹನ ಸಂಚಾರಕ್ಕೆ ಮತ್ತು ಜನಸಂಪರ್ಕಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ರಸ್ತೆಯ ಗುಂಡಿಗಳನ್ನು ತುಂಬುವ ಹಾಗೂ ನವೀಕರಣ ಕಾರ್ಯ ಎಂದಿನಿಂದ ಕೈಗೊಳ್ಳಲಾಗುವುದು (ವಿವರ ನೀಡುವುದು)?

ಶ್ರೀ ಹೆಚ್. ಡಿ. ರೇವಣ್ಣ (ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಹೌದು

ಆ) ರಸ್ತೆಯಲ್ಲಿ ಗುಂಡಿಗಳನ್ನು ಮುಚ್ಚುವ ಕಾರ್ಯವನ್ನು ಈಗಾಗಲೇ ಕೈಗೊಂಡಿದ್ದು ಕಾಮಗಾರಿ ಪ್ರಗತಿಯಲ್ಲಿದೆ. ಅನುದಾನದ ಲಭ್ಯತೆಯ ಮೇರೆಗೆ ಹಂತ ಹಂತವಾಗಿ ತೆಗೆದುಕೊಳ್ಳಲು ಪರಿಶೀಲಿಸಲಾಗುವುದು.

670(1472) ಶ್ರೀ. ಡಾ. ಅನ್ನದಾನಿ ಕೆ. (ಮಳವಳ್ಳಿ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪ್ರಸ್ತುತ ರಾಜ್ಯದಲ್ಲಿ ದಿನವೊಂದರ ವಿದ್ಯುತ್ ಬಳಕೆಯ ಪ್ರಮಾಣವೇನು;

ಆ) ಇದನ್ನು ಪೂರೈಸಲು ಸರಕಾರ ಯಾವ ಯಾವ ವಿದ್ಯುತ್ ಮೂಲಗಳನ್ನು ಅವಲಂಬಿಸಿಕೊಂಡಿದೆ;

ಇ) ದಿನೇ ದಿನೇ ಹೆಚ್ಚುತ್ತಿರುವ ವಿದ್ಯುತ್‌ನ ಬೇಡಿಕೆಯನ್ನು ಪೂರೈಸಲು ಹೊರ ರಾಜ್ಯಗಳಿಂದ ವಿದ್ಯುತ್ ಖರೀದಿ ಮಾಡಲು ಕ್ರಮ ಜರುಗಿಸಿದೆಯೇ;

ಈ) ಹೌದಾದಲ್ಲಿ ವಿವರಗಳೇನು;

ಶ್ರೀ ಹೆಚ್. ಡಿ. ರೇವಣ್ಣ (ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಜನವರಿ 2005 ನೇ ಮಾಹೆಯಲ್ಲಿ ರಾಜ್ಯದ ದಿನಂಪ್ರತಿ ವಿದ್ಯುತ್ ಬಳಕೆಯ ಪ್ರಮಾಣ, ಸರಾಸರಿ 100.5 ದಶಲಕ್ಷ ಯೂನಿಟ್ಟುಗಳು.

ಆ) ಇದನ್ನು ಈ ಕೆಳಕಂಡ ಮೂಲಗಳಿಂದ ಪೂರೈಸಲಾಗುತ್ತಿದೆ.

ಕ್ರ. ಸಂ.	ಮೂಲಗಳ ವಿವರಗಳು	ಪ್ರತಿದಿನ ಲಭ್ಯವಾಗುತ್ತಿರುವ ವಿದ್ಯುತ್‌ನ ಪ್ರಮಾಣ (ದ.ಲ. ಯೂನಿಟ್‌ಗಳಲ್ಲಿ)
1	ಜಲ ವಿದ್ಯುತ್ (ಕೆ.ಪಿ.ಸಿ.ಎಲ್)	25.249
2	ಶಾಖೋತ್ಪನ್ನ (ಕೆ.ಪಿ.ಸಿ.ಎಲ್)	24.882
3	ಜಲ ವಿದ್ಯುತ್ (ವಿ.ವಿ.ಎನ್.ಎಲ್)	1.286
4	ಶಾಖೋತ್ಪನ್ನ (ವಿ.ವಿ.ಎನ್.ಎಲ್)	1.636
5	ಕೇಂದ್ರೀಯ ವಿದ್ಯುತ್ ಉತ್ಪಾದನಾ ಘಟಕ ಮತ್ತು ಲಭ್ಯತೆ ಆಧಾರಿತ ದರ ಪ್ರಕಾರ	35.209

6	ಸಂಪ್ರದಾಯ ಮತ್ತು ಅಸಂಪ್ರದಾಯ ಮೂಲಗಳಿಂದ (ಖಾಸಗಿ ವಿದ್ಯುತ್ ಉತ್ಪಾದಕರಿಂದ)	12.306
	ಒಟ್ಟು	**100.568**

ಇ) ಮತ್ತು ಈ).

ಹೌದು, ರಾಜ್ಯಕ್ಕೆ ಪೀಕ್ ಲೋಡ್ ಸಮಯದಲ್ಲಿ ಕೆ.ಪಿ.ಸಿ.ಎಲ್., ಕೇಂದ್ರೀಯ ವಿದ್ಯುತ್ ಉತ್ಪಾದನಾ ಘಟಕಗಳು ಮತ್ತು ಎಲ್ಲಾ ಖಾಸಗೀ ವಿದ್ಯುತ್ ಉತ್ಪಾದಕರುಗಳಿಂದ ಲಭ್ಯವಾಗುವ ಸುಮಾರು 5429 ಮೆ.ವಾಟ್ ವಿದ್ಯುತ್‌ನ ಜೊತೆಗೆ ದಿನೇ ದಿನೇ ಹೆಚ್ಚುತ್ತಿರುವ ರಾಜ್ಯದ ವಿದ್ಯುತ್ ಬೇಡಿಕೆಯನ್ನು ಪೂರೈಸಲು ಪವರ್ ಟ್ರೇಡಿಂಗ್ ಕಾರ್ಪೊರೇಷನ್‌ನ್ನಿಂದ (ಪಿ.ಟಿ.ಸಿ) 117 ಮೆಗಾ ವಾಟ್ಸ್ ಮತ್ತು ನ್ಯಾಷನಲ್ ವಿದ್ಯುತ್ ವ್ಯಾಪಾರ ನಿಗಮ್ ಲಿಮಿಟೆಡ್‌ನ್ನಿಂದ (ಎನ್.ವಿ.ವಿ.ಎನ್.ಎಲ್) 100ಮೆಗಾವಾಟ್ಸ್ – ಈ ಎರಡೂ ಸಂಸ್ಥೆಗಳಿಂದ ಒಟ್ಟು 217 ಮೆ.ವ್ಯಾಟ್‌ನಷ್ಟು ವಿದ್ಯುತ್ತನ್ನು ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.

671(1473) ಶ್ರೀ ಡಾ. ಅನ್ನದಾನಿ ಕೆ. (ಮಳವಳ್ಳಿ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೇ?

ಅ) ಕೊಳ್ಳೇಗಾಲ ತಲ್ಲೂಕಿನ ಕಾವೇರಿನದಿ ಪಾತ್ರದಲ್ಲಿ ಯಾವ ಯಾವ ಖಾಸಗಿ ಜಲವಿದ್ಯುತ್ ಕಂಪನಿಗಳಿಗೆ ಜಲವಿದ್ಯುತ್ ತಯಾರಿಕಾ ಘಟಕವನ್ನು ಸ್ಥಾಪಿಸಲು ಅನುಮತಿ ನೀಡಲಾಗಿದೆ ಹಾಗೂ ಅವುಗಳ ವಿವರಗಳೇನು:

ಆ) ಅನುಮತಿ ಕೋರಿ ಬಂದ ಮನವಿಗಳು ಎಷ್ಟು:

ಇ) ಅನುಮತಿ ನೀಡುವಲ್ಲಿ ಅನುಸರಿಸಿದ ಮಾನದಂಡಗಳೇನು;

ಈ) ಈ ಪ್ರದೇಶದಲ್ಲಿ ಜಲವಿದ್ಯುತ್ ಘಟಕಗಳನ್ನು ಸ್ಥಾಪಿಸುವುದರಿಂದ ಉಂಟಾಗಬಹುದಾದ ನೈಸರ್ಗಿಕ ಏರು ಪೇರುಗಳ ಕುರಿತು ಸರಕಾರ ಸಮಗ್ರ ಪರಿಶೀಲನೆ ನಡೆಸಿದೆಯೇ;

ಉ) ಹೌದಾದಲ್ಲಿ ಪರಿಶೀಲನೆಯ ವಿವರಗಳೇನು;

ಊ) ಭರಚುಕ್ಕಿ ಬಳಿ ಸ್ಥಾಪಿಸಲುದ್ದೇಶಿಸಿರುವ ವಿದ್ಯುತ್ ಘಟಕದಿಂದ ಉಂಟಾಗಬಹುದಾದ ಅನಾಹುತಗಳ ಬಗ್ಗೆ ಸರಕಾರದ ನಿಲುವುಗಳೇನೆ;

ಋ) ಈ ಯೋಜನೆಗಾಗಿ ಕಂಪನಿಗೆ ನೀಡಿದ ಅರಣ್ಯ ಭೂಮಿ ಮತ್ತು ಸರಕಾರಿ ಭೂಮಿಯ ವಿಸ್ತೀರ್ಣವೇನು (ವಿವರಗಳನ್ನು ನೀಡುವುದು)

ಋೂ) ಅಮೂಲ್ಯ ನಿಸರ್ಗ ಸಂಪತ್ತನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ಭರಚುಕ್ಕಿ ಬಳಿ ಸ್ಥಾಪಿಸಲುದ್ದೇಶಿಸಿರುವ ಮಿನಿ ಹೈಡಲ್ ಪ್ರಾಜೆಕ್ಟನ್ನು ಕೈಬಿಡಲು ಸರಕಾರ ಮುಂದಾಗುವರೇ;

ಶ್ರೀ ಹೆಚ್. ಡಿ. ರೇವಣ್ಣ (ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಕೊಳ್ಳೆಗಾಲ ತಾಲ್ಲೂಕಿನ ಕಾವೇರಿ ನದಿ ಪಾತ್ರದಲ್ಲಿ ಕಿರುಜಲ ವಿದ್ಯುತ್ ತಯಾರಿಕಾ ಘಟಕವನ್ನು ಸ್ಥಾಪಿಸಲು ಅನುಮತಿ ನೀಡಲಾದ ಖಾಸಗಿ ಜಲವಿದ್ಯುತ್ ಕಂಪನಿಗಳ ಪಟ್ಟಿಯನ್ನು ಲಗತ್ತಿಸಲಾಗಿದೆ.

ಆ) ಅನುಮತಿ ಕೋರಿ ಬಂದ ಮನವಿಗಳು ಒಟ್ಟು 12